# ಬಳ್ಳಾರಿ ಜಿಲ್ಲಾ ಪೊಲೀಸ್ ಇಲಾಖೆಯಿಂದ ಅಂತರಾಷ್ಟ್ರೀಯ ಮಹಿಳಾದಿನಾಚರಣೆ ಅಂಗವಾಗಿ ಸನ್ಮಾನ



ಬಳ್ಳಾರಿ,ಮಾ-: ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಬುಧವಾರದಂದು ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಜಿಲ್ಲೆಯಎಲ್ಲಾ ಮಹಿಳಾ ಅಧಿಕಾರಿ, ಸಿಬ್ಬಂದಿಯವರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು

.ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜೀತ್ ಕುಮಾರ್ ಬಂಡಾರುಅವರು, ಮಹಿಳಾ ಅಧಿಕಾರಿ, ಸಿಬ್ಬಂದಿಯವರಿಗೆ ಶುಭಾಷಯ ಕೋರಿದರು.ಇದೇ ಸಂದರ್ಭದಲ್ಲಿ ಪೊಲೀಸ್ ಠಾಣೆ, ಕಚೇರಿ ಹಾಗೂ ಘಟಕಗಳಲ್ಲಿ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿದ ಸಿಬ್ಬಂದಿಯವರಿಗೆ ನಗದು ಬಹುಮಾನ ಹಾಗೂ ಪ್ರಶಂಸನಾ ಪತ್ರ ನೀಡಿ ಗೌರವಿಸಿದರು.ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಹಗರಿ ಕೃಷಿ ಸಂಶೋಧನಾ ಕೇಂದ್ರದ ಆಹಾರ ವಿಜ್ಞಾನದ ವಿಜ್ಞಾನಿಗಳಾದ ಶಿಲ್ಪ ಅವರು ಮಾತನಾಡಿ, ಮಹಿಳೆಯರು ತಮ್ಮ ಆರೋಗ್ಯವನ್ನು ಉತ್ತಮ ರೀತಿಯಲ್ಲಿ ಕಾಪಾಡಿಕೊಳ್ಳಲು ಉತ್ತಮ ಸಲಹೆ ಟಿಸೂಚನೆ ನೀಡಿದರು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರ ವೃತ್ತಿ ಜೀವನ ಸುಧಾರಿಸುವ ನಿಟ್ಟಿನಲ್ಲಿ ಇಬ್ಬರಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು.ಕಾರ್ಯಕ್ರಮದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನಟರಾಜಸೇರಿದಂತೆ ಅಧಿಕಾರಿಗಳು ಭಾಗವಹಿಸಿದ್ದರು.

# ಪ್ರತಿಯೊಂದು ಓಟು, ದೇಶದ ಭವಿಷ್ಯವನ್ನೇ ಬದಲಾಯಿಸುತ್ತದೆ"-ರಾಹುಲ್ ಶರಣಪ್ಪ ಸಂಕನೂರು



ಬಳ್ಳಾರಿ ಮಾ -: "ನನ್ನ ಒಂದು ಓಟಿನಿಂದ ಏನು ಆಗುತ್ತದೆ ಎಂಬ ನಿರ್ಲಕ್ಷ್ಯ ಬೇಡ,ಪ್ರತಿಯೊಂದು ಓಟು, ದೇಶದ ಭವಿಷ್ಯವನ್ನೇ ಬದಲಾಯಿಸುತ್ತದೆ" ಎಂದು ರಾಹುಲ್ ಶರಣಪ್ಪ ಸಂಕನೂರು, ಐಎಎಸ್, ಅಧ್ಯಕ್ಷರು, ಜಿಲ್ಲಾ ಸ್ವೀಪ್ ಕಮಿಟಿ,ಬಳ್ಳಾರಿ ಅವರು ನೆಹರು ಯುವ ಕೇಂದ್ರ, ಬಳ್ಳಾರಿ ಮತ್ತು ಬಳ್ಳಾರಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ &ಚಿಟಡಿ; ಮ್ಯಾನೇಜ್‌ಮೆಂಟ್ ಕಾಲೇಜ್, ಬಳ್ಳಾರಿ ಸಂಯುಕ್ತಾಶ್ರದಲ್ಲಿ ನಡೆದ "ನೆರೆಹೊರೆ ಯುವ ಸಂಸತ್ತು-2024" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. "ನಗರ ಪ್ರದೇಶಗಳಲ್ಲಿ ಮತದಾನ ಮಾಡುವವರ ಸಂಖ್ಯೆ ಗ್ರಾಮೀಣ ಪ್ರದೇಶಗಳಿಗಿಂತ ಕಡಿಮೆ ಕಂಡುಬಂದಿದ್ದು, ಮೂಲಭೂತ ಸೌಲಭ್ಯಗಳಾದ ನೀರು, ಚರಂಡಿ, ರಸ್ತೆ, ವಿದ್ಯುತ್, ಇತರ ಸಮಸ್ಯೆಗಳ ಬಗ್ಗೆ ಗಮನಹರಿಸಿ, ಸೂಕ್ತವಾಗಿ ಪರಿಹರಿಸಲು ಇಂದಿನ ಯುವಶಕ್ತಿ ಮುಂದಿನ ಲೋಕಸಭಾ ಚುನಾವಣೆಯಲ್ಲಿ ತಪ್ಪದೇ ಮತದಾನ ಮಾಡುವ ಮೂಲಕ ಯಶಸ್ವಿಗೊಳಿಸಬೇಕೆಂದು" ವಿದ್ಯಾರ್ಥಿಗಳಿಗೆ ಕರೆ ನೀಡಿದರು.

"ಮತ ಚಲಾವಣೆ ನಮ್ಮ ಹಕ್ಕು ಮತ್ತು ಮುಂಬರುವ ಲೋಕಸಭಾಚುನಾವಣೆಯಲ್ಲಿ ಪ್ರತಿಯೊಬ್ಬರೂ ತಮ್ಮ ಅತ್ಯಮೂಲ್ಯವಾದ ಮತವನ್ನುಚಲಾಯಿಸಬೇಕು ಮತ್ತು ಸಂವಿಧಾನದ ಪ್ರಕಾರ ಜನರಿಂದ, ಜನರಿಗಾಗಿ,ಜನರಿಗೋಸ್ಕರ ಒಂದೇ ಅಲ್ಲ.. ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಂದ,ವಿದ್ಯಾರ್ಥಿಗಳಿಗಾಗಿ, ವಿದ್ಯಾರ್ಥಿಗಳಿಗೋಸ್ಕರ ಇರುವುದಾಗಿ, ಹಾಗೂ ಪ್ರತಿಯೊಬ್ಬವಿದ್ಯಾರ್ಥಿಯೂ ತಪ್ಪದೇ ಮತವನ್ನು ಚಲಾಯಿಸಬೇಕೆಂದು" ಕಾಲೇಜಿನನಿರ್ದೇಶಕರಾದ ವೈ.ಜೆ.ಪೃಥ್ವಿರಾಜ್ ಭೂಪಾಲ್ ರವರು ವಿದ್ಯಾರ್ಥಿಗಳಿಗೆಕರೆಕೊಟ್ಟರು.

ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಮೊಂಟು ಪಟಾರ್ ರವರುವಿದ್ಯಾರ್ಥಿಗಳಿಗೆ ಚುನಾವಣಾ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.ಬಿ.ಸೋಮಶೇಖರ್, ಜಂಟಿ ನಿರ್ದೇಶಕರು, ಜಿಲ್ಲಾಕೈಗಾರಿಕಾಕೇಂದ್ರ, ಬಳ್ಳಾರಿ ಇವರು ವಿದ್ಯಾರ್ಥಿಗಳಿಗೆ ಉದ್ಯಮಶೀಲತೆ ಬಗ್ಗೆ ಮಾಹಿತಿಯನ್ನುನೀಡಿದರು.ಬಿಐಟಿಎಂ ಕಾಲೇಜಿನ ಇಂಜಿನಿಯರಿಂಗ್ ಮತ್ತು ಎಂಬಿಎ ವಿದ್ಯಾರ್ಥಿಗಳು ಡಾ. ಕೆ.ರೂಪ, ನಾಗರಾಜ್, ಸುಶ್ಮ ಪ್ರೇಮಕಲಾಲ್, ಸಂಪತ್ ಕುಮಾರ್ ಇವರ ನಿರ್ದೇಶನದಲ್ಲಿ "ಅಣಕು ಸಂಸತ್ತು ಅಧಿವೇಶನವನ್ನು" ಪ್ರಸ್ತುತ ಪಡಿಸಿದರು. ಎನ್‌ಎಸ್‌ಎಸ್, ಎನ್‌ಸಿಸಿವಿದ್ಯಾರ್ಥಿಗಳೊಂದಿಗೆ ಸುಮಾರು 450 ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಕಾಲೇಜಿನ ಪ್ರಾಚಾರ್ಯರಾದ ಡಾ. ಯಡವಳ್ಳಿ ಬಸವರಾಜ್ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಎನ್.ಎಸ್.ಎಸ್. ಪ್ರೊಗ್ರಾಮ್ ಆಫೀಸರ್ ಅಶೋಕ್.ಬಿ, ಡಾ.ಶೇಕ್‌ಮೀರಾ, ಕಮಲ್ ಕಿಶೋರ್, ಲಕ್ಷ್ಮಿರೆಡ್ಡಿ, ಅಮರೇಶ, ಬೆಂಜಮಿನ್,ಬಿಸಲಹಳ್ಳಿ ಬಸವರಾಜ್ ಕಾರ್ಯಕ್ರಮ ನಿರ್ವಹಿಸಿದರು.ಡಾ. ವೀಣಾ ಅವರುನಿರೂಪಿಸಿದರು, ರೇವತಿ ವಂದನಾರ್ಪಣೆ ಮಾಡಿದರು.

# ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವ ಕೊಳಗಲ್ ಗ್ರಾಮ



ಬಳ್ಳಾರಿ ಮಾ -: ತಾಲೂಕಿನ ಕೊಳಗಲ್ಲು ಗ್ರಾಮದಲ್ಲಿ ಕುಡಿಯುವ ನೀರಿನ ಕೆರೆ ಸೇರಿದದಂತೆ ಸರ್ಕಾರಿ ಶಾಲೆಗಳಲ್ಲಿನ ಮಕ್ಕಳಿಗೆ ಶುದ್ಧ ಕುಡಿಯುವ ನೀರು ಶೌಚಾಲಯಗಳು ಇಲ್ಲದಿರು ವುದು. ಗ್ರಾಮದಲ್ಲಿನ ಸುಮಾರು 250ಕ್ಕೂ ಹೆಚ್ಚು ಬಡ ಕುಟುಂಬಗಳು ನಿವೇಶನ ಮತ್ತು ವಸತಿ ಇಲ್ಲದೆ ಲಭ್ಯವಿರುವ ಚಿಕ್ಕಗುಡೀಸಲಲ್ಲಿ ಮೂರು ನಾಲ್ಕು ಕುಟುಂಬಗಳು ಒತ್ತಡದ.ಸಂಕಳ್ಟದಲ್ಲಿ ವಾಸಿಸು ತ್ತಿದ್ದಾರೆ ಎಂದು ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಆಜಈಖ ಜಿಲ್ಲಾಧ್ಯಕ್ಷರಾದ ಯು ಎರಿಸ್ವಾಮಿ ಗ್ರಾಮದ ವಾರ್ಡ್ ಗಳಲ್ಲಿ ಸಿಸಿ ರಸ್ತೆ , ಚರಂಡಿ ವ್ಯವಸ್ಥೆ ಇಲ್ಲದಿರುವುದಿಲ್ಲ. ಸಾರ್ಜನಿಕ ಶೌಚಾಲಯಗಳಿಲ್ಲ ಗ್ರಾಮದಲ್ಲಿ ಸಾಕಳ್ಟು ವಿದ್ಯಾವಂತ ಯುವಕರಿದ್ದು ನಿತ್ಯದ ವರ್ತಮಾನ ತಿಳಿಯಲು ಗ್ರಂಥಾಲಯ ಇದ್ದು ಇಲ್ಲದಂತಾಗಿದೆ. ಇಂತಹ ಅನೇಕ ಮೂಲಭೂತ ಸೌಕರ್ಯಗಳಿಂದ ಗ್ರಾಮದ ಜನರು ವಂಚಿತರಾಗಿದ್ದಾರೆ.ಈ ಎಲ್ಲಾ ಸಮಸ್ಯೆಗಳ ಬಗ್ಗೆ ಸ್ಥಳೀಯ ಶಾಸಕರ ಮತ್ತು ಈ ಭಾಗದ ಸಂಸದರ ಗಮನಕ್ಕೆ ತರಲಾಗಿದೆ. ಆದರೆ ಅವರಾರೂ ಗ್ರಾಮಕ್ಕೆ ಭೇಟಿ ನೀಡಿಲ್ಲ. ಚುನಾವಣೆ ಸಂದರ್ಭದಲ್ಲಿ ಜನರ ಬಳಿ ವೋಟು ಕೇಳಲು ಬರುವ ರಾಜಕೀಯ ನಾಯಕರು. ಗೆದ್ದು ಸಂಸದ, ಶಾಸಕರಾದ ಮೇಲೆ ಗ್ರಾಮಗಳ ಕಡೆಗೆ ತಿರುಗಿ ನೋಡುವ ಕನಿಷ್ಟ ಪ್ರಯತ್ನ ಮಾಡದಿರುವುದು ಹಾಗೂ ಜನರ ಕುಂದುಕೊರತೆ ಆಲಿಸದಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ ಎಂದರು.

# ಆರ್‌ವೈಎಂಇಸಿಯಲ್ಲಿ ಅದ್ಧೂರಿಯಾಗಿ ವಿಶ್ವ ಮಹಿಳಾ ದಿನಾಚರಣೆ



ಬಳ್ಳಾರಿ ಮಾ -ಬಳ್ಳಾರಿ ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ತಾಂತ್ರಿಕ ಮಹಾವಿದ್ಯಾಲಯದಲ್ಲಿ ದಿನಾಂಕ 12.03.2024 ರಂದು ಮಹಿಳಾ ಶಿಕ್ಷಕರು ವಿದ್ಯಾರ್ಥಿನ ವೃಂದದವರ ಸಮ್ಮುಖದಲ್ಲಿ ಬೆಳಗ್ಗೆ 10.30 ಗಂಟೆಗೆ ವಿಶ್ವ ಮಹಿಳಾ ದಿನಾಚರಣೆಯನ್ನು ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಮುಖ್ಯ ಅತಿಥಿಗಳಾದ ಡಾ. ಪ್ರಣಿತ ಅಜಯ್ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಹಾಗೂ ಕಾಲೇಜಿನ ಪ್ರಾಂಶುಪಾಲರು ಡಾ.ಟಿ ಹನುಮಂತ್ ರೆಡ್ಡಿ , ಡೀನ್-ಅಕಾಡಮಿಕ್ ಡಾ|| ಹೆಚ್.ಗಿರೀಶ, ಆರ್‌ವೈಎಂಈಸಿ-ಮಹಿಳಾ ಕೋಶದ ಸಂಯೋಜಕರು ಡಾ|| ಶೋಭಾ ಎಂ.ಎಸ್, ಡಾ|| ಪ್ರಭಾವತಿ, ಶ್ರೀಮತಿ ಅನಸೂಯ ಪಾಟಿಲ್, ಡಾ|| ಡಾ. ಚಿನ್ನ ವಿ ಗೌಡರ್, ಡಾ|| ಸಾಯಿ ಮಾಧವಿ, ಡಾ|| ಸುಮಂಗಳ.ಬಿ, ಶ್ರೀಮತಿ ಅಪರ್ಣ ವಸ್ತ್ರದ, ಶ್ರೀಮತಿ ಗಂಗಮ್ಮ ಮಹೇಶ ಸಜ್ಜನ್, ಶ್ರೀಮತಿ ಸೌಮ್ಯ, ಶ್ರೀಮತಿ ರಾಖಿ ಪಾಟೀಲ್ ಇನ್ನಿತರೇ ಗಣ್ಯರು ಉಪಸ್ಥಿತರಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾಕ್ಟರ್ ಪ್ರಣಿತ ಅಜಯ್ ಅವರು ವಿದ್ಯಾರ್ಥಿನಿಯರನ್ನು ಉದ್ದೇಶಿಸಿ ಮಾತನಾಡುತ್ತಾ ಹೆಣ್ಣು ಮಕ್ಕಳ ಆರೋಗ್ಯ ಮತ್ತು ನೈರ್ಮಲ್ಯದ ಕುರಿತು ತಿಳುವಳಿಕೆ ನೀಡಿದರು. ಹಾಗೂ ಹೆಣ್ಣು ಮಕ್ಕಳು ಅವಶ್ಯಕವಾಗಿ ಪಡೆಯಬೇಕಾದ ಲಸಿಕೆಗಳ ಬಗ್ಗೆ ಮಾಹಿತಿ ನೀಡಿದರು. ಪ್ರಾಂಶುಪಾಲರಾದ ಡಾ.ಟಿ ಹನುಮಂತ್ ರೆಡ್ಡಿಯವರು ಮಹಿಳೆಯರಿಗೆ ಇರುವ ಕಾನೂನುಗಳು ಮತ್ತು ಸವಲತ್ತುಗಳ ಬಗ್ಗೆ ಮಾಹಿತಿ ನೀಡಿದರು. ಡಾ. ಸಾಯಿ ಮಾಧವಿ ಅವರು ಮಹಿಳೆ ಎಂದು ಪ್ರತಿಯೊಂದು ರಂಗದಲ್ಲೂ ಪುರುಳನಗೆ ಸಮನಾಗಿ ದುಡಿಯುತ್ತಿದ್ದಾಳೆ ಮಹಿಳೆ ಯಾವ ಕ್ಷೇತ್ರದಲ್ಲೂ ಕಡಿಮೆ ಇಲ್ಲ ಎಂದು ಹೇಳಿದರು.

ಈ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವ ಉನ್ನತ ಡಾಕ್ಟರೇಟ್ ಪದವಿ ಪಡೆದಿರುವುದಲ್ಲದೆ ವಿಶೇಳ ಸಾಧನೆಗಳನ್ನು ಮಾಡಿರುವ ಮತ್ತು ಪುಸ್ತಕ ಬಿಡುಗಡೆ ಮಾಡಿರುವ ಮಹಿಳೆಯರಾದ ಡಾ. ಪ್ರಭಾವತಿ, ಡಾ. ಚಿನ್ನ ವಿ ಗೌಡರ್ , ಡಾ. ಬಾಗ್ಯ, ಸರ್ವರ್ ಬೇಗಂ, ವಿನೂತ ಪ್ರಶಾಂತ್, ಡಾ. ಮಾನಸ ಅವರನ್ನು ಮಹಾವಿದ್ಯಾಲಯದ ಆರ್ ವೈ ಎಂ ಇ ಸಿ ಮಹಿಳೆಯರ ಪರವಾಗಿ ಸನ್ಮಾನಸಲಾಯಿತು. ಕಾರ್ಯಕ್ರಮದಲ್ಲಿ ಎಲ್ಲಾ ವಿಭಾಗಗಳ ಮುಖ್ಯಸ್ಥರು ವಿದ್ಯಾರ್ಥಿನ ವೃಂದದವರು ಮಹಾವಿದ್ಯಾಲಯದ ಮಹಿಳಾ ಸಿಬ್ಬಂದಿ ಭಾಗವಹಿಸಿದ್ದರು. ಪ್ರೊಫೆಸರ್ ಡಾ. ಶೋಭಾ ಸ್ವಾಗತಿಸಿದರು, ಶ್ರೀಮತಿ ಸರಸ್ವತಿ ವಂದಿಸಿದರು ಹಾಗೂ ಶ್ರೀಮತಿ ಉಮಾದೇವಿ ನಿರೂಪಿಸಿದರು.

# ಮತ್ಸ್ಯ ವಾಹಿನಿ ಯೋಜನೆ: ಅರ್ಜಿ ಆಹ್ವಾನ

ವಿಜಯಪುರ, ಮಾ.-: 2023-24 ನೆ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಮತ್ಸ್ಯ ವಾಹಿನ ಯೋಜನೆ ಅಡಿಯಲ್ಲಿ ತ್ರಿಚಕ್ರ ವಾಹನಗಳನ್ನು ಪರವಾನಗೆ ಆಧಾರದಲ್ಲಿ ಪಡೆಯಲು ಆಸಕ್ತ ಮೀನು ಮಾರಾಟಗಾರರಿಂದ ಅರ್ಜಿಯನ್ನು ಆಹ್ವಾನಸಲಾಗಿದೆ.

ಜಿಲ್ಲೆಗೆ ಒಟ್ಟು 3 ಭೌತಿಕ ಗುರಿಗಳಿದ್ದು, ಆಯ್ಕೆಯಾಗುವ ಅರ್ಜಿದಾರರು ಇಲಾಖೆಗೆ ಭದ್ರತಾ ಠೇವಣಿ (ಸಾಮಾನ್ಯ ವರ್ಗದವರು ಒಂದು ಲಕ್ಷ ರೂಪಾಯಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಮಹಿಳೆಯರು 50 ಸಾವಿರ ರೂಪಾಯಿ) ಮೊತ್ತವನ್ನು ನೀಡಬೇಕಿರುತ್ತದೆ. ಅರ್ಜಿ ಸಲ್ಲಿಸಲು ಮಾ.19 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿ ವಿಜಯಪುರ, ಮುದ್ದೇಬಿಹಾಳ (9886820761) ಇವರನ್ನು ಸಂಪರ್ಕಿಸಬಹುದು ಎಂದು ವಿಜಯಪುರ ಮೀನುಗಾರಿಕೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪರಿಶಿಷ್ಟರ ಅನುದಾನವನ್ನು ಕಾಂಗ್ರೆಸ್ ಗ್ಯಾರೆಂಟಿಗಳಿಗೆ ಬಳಕೆ ಮಾಡಿದೆ-ಶ್ರೀರಾಮುಲು ಆರೋಪ




ಬಳ್ಳಾರಿ ಮಾ-: ಪರಿಶಿಷ್ಟ ಪಂಗಡಗಳ ಸಮುದಾಯ ವನ್ನು ಕಾಂಗ್ರೆಸ್ ಕೇವಲ ರಾಜಕೀಯಕ್ಕಾಗಿ ಬಳಸಿಕೊಂಡು ಪರಿಶಿಷ್ಟರ ಅನುದಾನವನ್ನು ಐದು ಗ್ಯಾರೆಂಟಿಗಳಿಗೆ ಬಳಕೆ ಮಾಡಿಕೊಂಡಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಅವರು ಆರೋಪಿಸಿದರು.ನಗರದ ಬಸವ ಭವನದಲ್ಲಿ ಬಿಜೆಪಿ ಎಸ್ಟಿ ಮೋರ್ಚಾ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಪರಿಶಿಷ್ಟ ಪಂಗಡಗಳ ಮುನ್ನಡೆ ಸಮಾವೇಶಕ್ಕೆ ಚಾಲನೆ ನೀಡಿ ಮಾತನಾಡಿದರು. ಎಸ್ಟಿ ವರ್ಗದವರು, ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದೇ ಬರಬೇಕು ಎಂದು ನಮ್ಮ ಬಿಜೆಪಿ ಸರ್ಕಾರ ಅನೇಕ ಯೋಜನೆ ಗಳನ್ನು ಅನುಷ್ಟಾನಕ್ಕೆ ತಂದಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಪರಿಶಿಷ್ಟ ಪಂಗಡಗಳ ಅಭಿವೃದ್ದಿಗೆ ಸಾಕಷ್ಟು ಕೊಡುಗೆಗಳನ್ನು ನೀಡಿದೆ. ಎಸ್ಸಿ, ಎಸ್ಟಿವರ್ಗದವರ ಕಲ್ಯಾಣಕ್ಕಾಗಿ ಮೀಸಲಿಟ್ಟ ಅನುದಾನವನ್ನು ಸುಳ್ಳು ಗ್ಯಾರಂಟಿಗಳ ಮೂಲಕ ಅಧಿಕಾರಕ್ಕೆ ಬಂದ ರಾಜ್ಯ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿದೆ. ಕಾಂಗ್ರೆಸ್ ಸರ್ಕಾರಕ್ಕೆ ಹಿಂದುಳಿದವರ್ಗದವರ ಅಭಿವೃದ್ದಿ ಬೇಕಿಲ್ಲ, ಗ್ಯಾರಂಟಿ ಕೊಡಲಿ ಬೇಡ ಅನ್ನೋಲ್ಲ.ಆದರೆ, ಎಸ್ಸಿ, ಎಸ್ಟಿ ಅವರಿಗೆ ಮೀಸಲಿಟ್ಟ ಅನುದಾನ ಅದಕ್ಕೆ ಬಳಕೆ ಬೇಡ ಎಂದು ಕಿಡಿ ಕಾರಿದರು.

ಸಂಸದ ವೈ.ದೇವೇಂದ್ರಪ್ಪ ಅವರು ಮಾತನಾಡಿ, ಪ್ರಧಾನ ಮಂತಿನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಎಸ್ಟಿವರ್ಗದವರು ಸೇರಿದಂತೆ ಎಲ್ಲ ವರ್ಗದವರ ಅಭಿವೃದ್ಧಿಗಾಗಿ ಅನೇಕಯೋಜನೆಗಳನ್ನು ಜಾರಿಗೊಳಿಸಿದೆ. ಮೋದಿ ಅವರು ಪ್ರಧಾನಿಯಾದ ಬಳಿಕದೇಶದ ಅಭಿವೃದ್ಧಿ ಚಿತ್ರಣವೇ ಬದಲಾಗಿದೆ. ಮೋದಿ ಅವರು, ವ್ಯಕ್ತಿಯಲ್ಲ,ಅವರೊಬ್ಬ ದೇಶದ ಶಕ್ತಿಯಾಗಿದ್ದು, ಅವರನ್ನು ನಾವು ಪಡೆದಿದ್ದುಬಹುದೊಡ್ಡ ಪುಣ್ಯ ಎಂದರು. ಪ್ರಧಾನಿ ಅವರು ಅವಳಿ ಜಿಲ್ಲೆಗೆ ತಲಾ 30 ಸಾವಿರ ಕೋಟಿಗೂ ಹೆಚ್ಚು ಅನುದಾನ ಕೊಟ್ಟಿದ್ದು, ಅವಳಿ ಜಿಲ್ಲೆಯ ಅಭಿವೃದ್ದಿ ಚಿತ್ರಣವೇ ಬದಲಾಗಿದೆ. ಒಳ್ಳೆಯ ಹೆದ್ದಾರಿ ನಿರ್ಮಾಣ, ರೈಲು ನಿಲ್ದಾಣ ಅಭಿವೃದ್ದಿ,ಸೇರಿದಂತೆ ಅನೇಕ ಬೃಹತ್ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದೇವೆ,ನಮ್ಮ ಸರ್ಕಾರದ ಜನಪರ ಕಾರ್ಯಕ್ರಮಗಳೇ ಮುಂಬರುವ ಚುನಾವಣೆಗೆ ಶ್ರೀರಕ್ಷೆಯಾಗಲಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೋಕಾ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.ಈ ಸಂದರ್ಭದಲ್ಲಿ ಎಮ್ಮೆಲ್ಸಿಗಳಾದ ವೈ. ಎಂ. ಸತೀಶ್,ಹೇಮಲತಾ ನಾಯಕ್, ಎಸ್ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು,ಉಪಾಧ್ಯಕ್ಷ ಎಚ್ ಓಬಳೇಶ್, ಜಿಲ್ಲಾಧ್ಯಕ್ಷ ಎನ್. ರಾಮಕೃಷ್ಣ, ಚಂದ್ರಶೇಖರ್ ಹಲಗೇರಿ,ಅಯ್ಯಪ್ಪ ಮೇಕಲ, ವಿಜಯ ಲಕ್ಷ್ಮಿ , ಮುರಹರಿಗೌಡ, ಡಾ. ಮಣಿಪಾಲ್, ಹನುಮಂತ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಿದ್ದಪ್ಪ, ಸೋಮಶೇಖರ್ ಗೌಡ, ಉಡೇದ ಸುರೇಶ ಸೇರಿದಂತೆ ಇತರರು ಇದ್ದರು.

# ಯುವಕರು ದುಶ್ಚಟಗಳಿಂದದೂರವಿರಿ-ಮೀನಳ್ಳಿ ತಾಯಣ್ಣ




ಬಳ್ಳಾರಿ ಮಾ-:. ಯುವಕರು ದುಶ್ಚಟಗಳಿಂದ ದೂರವಿದ್ದು ಆರೋಗ್ಯಪೂರ್ಣ ಚಟುವ 'ಟಿಕೆಗಳಲ್ಲಿ ಭಾಗವಹಿಸಿ ಉತ್ತಮ ಭವಿಷ್ಯ ರೂಪಿಸಿ ಕೊಳ್ಳಬೇಕು' ಎಂದು ಬಳ್ಳಾರಿ ಜೆಡಿಎಸ್ ಪಕ್ಷದ ಜಿಲ್ಲಾ ಅಧ್ಯಕ್ಷ ಮೀನಳ್ಳಿ ತಾಯಣ್ಣ ಕರೆ ನೀಡಿದರು.

ವಿಶ್ವ ತಂಬಾಕು ರಹಿತ ದಿನದ ಆಚರಣೆ ಅಂಗವಾಗಿ ಬುಧವಾರ ನಗರದ ಜಿಲ್ಲಾ ಜೆಡಿಎಸ್‌ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.ಧೂಮಪಾನ ಮಾಡುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿರುವುದು ಅಪಾಯದ ಬೆಳವಣಿಗೆಯಾಗಿದೆ. ಕ್ಷಯ ರೋಗದಿಂದ ಶೇ 38, ಕ್ಯಾನ್ಸರ್‌ನಿಂದ ಶೇ 32, ಶ್ವಾಸಕೋಶ ಸಮಸ್ಯೆಯಿಂದ ಶೇ 31, ಹೃದಯಾಘಾತ ಹಾಗೂ ಶೇ 20 ಜನರು ಸಾವನ್ನಪ್ಪುತ್ತಿದ್ದಾರೆ. ಎಲ್ಲರೂ ಇದರ ಬಗ್ಗೆ ಅರಿವು ಹೊಂದಿ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು. ನೂತನ ಜೆಡಿಎಸ್ ಪಕ್ಷದ ಜಿಲ್ಲಾ ಪದಾಧಿಕಾರಿಗಳ ಆಯ್ಕೆ-ಈ ವೇಳೆ ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದು ಜೆಡಿಎಸ್ ಪಕ್ಷವನ್ನು ಬಲಿಷ್ಟಗೊಳಿಸಲು ಜಿಲ್ಲಾಧ್ಯಕ್ಷರಾದ ಮೀನಳ್ಳಿ ತಾಯಣ್ಣರವರ ನೇತೃತ್ವದಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು,ಕಂಪ್ಲಿ ವಿಧಾನಸಭಾ ಕ್ಷೆತ್ರದ ಅಧ್ಯಕ್ಷರಾಗಿಎಚ್ ಎಂ ವಿಶ್ವನಾಥ ಸ್ವಾಮಿ,ಜಿಲ್ಲಾ ಕಾರ್ಮಿಕರ ಘಟಕದ ಪ್ರದಾನ ಕಾರ್ಯದರ್ಶಿಯಾಗಿ ಸಿದ್ದು ಹೆಗ್ಡೆ,ನಗರ ಪರಿಷ್ಟಜಾತಿ ನಗರ ಅಧ್ಯಕ್ಷರಾಗಿಪಿ ರಾಮು,ಜಿಲ್ಲಾ ಮಹಿಳಾ ವಿಭಾಗ ಮಹಾ ಪ್ರದಾನ ಕಾರ್ಯದರ್ಶಿಯಾಗಿ ರೇಣುಕಾ,ಜಿಲ್ಲಾ ಮಹಿಳಾ ವಿಭಾಗ ಘಟಕದ ಹಿರಿಯ ಉಪಾಧ್ಯಕ್ಷರಾಗಿ ಎ ವರಲಕ್ಷ್ಮಿ, ಮಹಿಳಾ ಘಟಕದ ಉಪಾಧ್ಯಕ್ಷರಾಗಿ ಶಬಾನ, ಮಹಿಳಾ ಘಟಕದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಕೆ, ಲಕ್ಷ್ಮಿ,ಮಹಿಳಾ ಘಟಕದ ಸಂಘಟನೆ ಕಾರ್ಯದರ್ಶಿಯಾಗಿ ರೇಷ್ಮಾ,ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ರಹಮತ್ ಬಿ, ರವರನ್ನು ಆಯ್ಕೆ ಮಾಡಿ ಆದೇಶ ಪತ್ರವನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಪಕ್ಷದ ಯುವಕಾರ್ಯಕರ್ತರು ಮುಖಂಡರು ಹಾಜರಿದ್ದರು.

# ಮಹಿಳಾ ಸಬಲೀಕರಣ ಕೋಶವು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ



ಬೆಳಗಾವಿ-:ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮಹಿಳಾ ಸಬಲೀಕರಣ ಕೋಶವು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮಕ್ಕೆ ಮುಖ್ಯಅತಿಥಿಗಳಾಗಿ ಡಾ. ವನಿತಾ ತೊರವಿ ಮಕ್ಕಳ ಹಕ್ಕುಗಳ ಅಂತರಾಷ್ಟ್ರೀಯ ರಾಯಭಾರಿ.ಎಚ್.ಆರ್.ಓ ಇವರು ಆಗಮಿಸಿದ್ದರು.

ಮಹಿಳಾ ಶಕ್ತಿ, ಯುವ ಶಕ್ತಿಯ ಬಗ್ಗೆ ಮಾತಾನಾಡಿದ ಅವರು ಅಧುನಿಕತೆಯ ಜೊತೆಗೆ ನಮ್ಮ ದೇಶದ ಸಂಸ್ಕೃತಿಯನ್ನು ವಿಶ್ವದೆಲ್ಲೆಡೆ ಸಾರಬೇಕೆಂದು ಕರೆಕೊಟ್ಟರು ಅವರು ವಿವಿಧ ದೇಶಗಳಿಗೆ ಭೇಟಿ ನೀಡಿದಾಗ ಭಾರತದ ಮಹಿಳೆಯರು, ಭಾರತದ ಸಂಸ್ಕೃತಿಯ ಬಗ್ಗೆ ಅನ್ಯ ದೇಶಿಯರು ಗೌರವ ಕೊಡುವುದನ್ನು ವಿವರವಾಗಿ ವಿವರಿಸಿದರು..ಎಚ್.ಆರ್.ಓ ಹಾಗೂ ಅದರ ಕೌನ್ಸಲಿಂಗ್ ಸೆಂಟರ್‌ಗಳಿಂದ ಆಗುವ ಲಾಭದ ಬಗ್ಗೆ ವಿವರಿಸಿದರು, ಯಾರಿಗಾದರು ಸಹಾಯಬೇಕಿದ್ದರೆ ಅವರನ್ನು ಸಂಪರ್ಕಿಸಲು ಹೇಳಿದರು. ಗೌರವಾನ್ವಿತ ಅತಿಥಿಗಳಾಗಿ ಆಗಮಿಸಿದ ಶ್ರೀಮತಿ ರಾಜಶ್ರೀ ಜೈನಾಪು ಕೆ.ಎ.ಎಸ್ ಕುಲಸಚಿವರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಮಹಿಳಾ ಸಬಲೀಕರಣಕ್ಕೆ ಪ್ರೋತ್ಸಾಹ ನೀಡಿದರು. ಸರ್ಕಾರದ ಅನೇಕ ಸೌಲಭ್ಯಗಳ ಬಗ್ಗೆ ತಿಳಿಸಿ ಅವುಗಳ ಸದ್ಬಳಕೆ ಮಾಡಿಕೊಳ್ಳುವಂತೆ ಹೇಳಿದರು. ಅಧ್ಯಕ್ಷಿಯ ಸ್ಥಾನವನ್ನು ವಹಿಸಿದ ನೂತನ ಗೌರವಾನ್ವಿತ ಕುಲಪತಿಗಳಾದ ಪ್ರೋ. ಸಿ.ಎಮ್. ತ್ಯಾಗರಾಜ ರವರು, ಸ್ತ್ರೀ ಶಕ್ತಿಯನ್ನು ಹುರುದುಂಬಿಸಿ ಮಹಿಳೆಯರು ಇನ್ನಷ್ಟು ಸಾಧಿಸಲು ಪ್ರೇರೆಪಿಸಿದರು. ಜ್ಞಾನವೇ ದೊಡ್ಡಶಕ್ತಿ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ಸಿಬ್ಬಂದಿಗಳು, ವಿದ್ಯಾರ್ಥಿಗಳು, ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಬೇಕೆಂದು ಕರೆನೀಡಿದರು.

ಗೌರವಾನ್ವಿತ ಅತಿಥಿಗಳಾಗಿ ಹಣಕಾಸು ಅಧಿಕಾರಿಯಾದ ಎಸ್.ಬಿ.ಆಕಾಶ ಉಪಸ್ಥಿತರಿದ್ದರು. ವಿಶ್ವವಿದ್ಯಾಲಯದ ಮಹಿಳಾ ಸಾಧಕಿಯರಾದ ಡಾ. ನಂದಿನಿ ದೇವರಮನಿ, ಡಾ. ಶೋಭಾ ನಾಯಕ, ಡಾ. ಮಲ್ಲಮ್ಮ ರೆಡ್ಡಿ, ಡಾ. ನಾಗರತ್ನ ಪರಾಂಡೆ ಇವರನ್ನು ಸನ್ಮಾನಿಸಲಾಯಿತು. ಮಹಿಳೆಯರ ಸಂಬಂಧಿಸಿದಂತೆ ಏರ್ಪಡಿಸಿದ್ದ ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಲಾಯಿತು. ಮಹಿಳಾ 'ಡಿ' ದರ್ಜೆ ನೌಕರರಿಗೆ ಉಡುಗೊರೆಗಳನ್ನು ನೀಡಿ ಅವರ ಕಾರ್ಯವನ್ನು ಶ್ಲಾಘಿಸಲಾಯಿತು. ಮಹಿಳಾ ಸಬಲೀಕರಣ ಕೋಶದ ನಿರ್ದೇಶಕರಾದ ಪ್ರೋ. ನಾಗರತ್ನ ವಿ ಪರಾಂಡೆ ಇವರು ಪ್ರಸ್ತಾವಿಕ ನುಡಿಗಳನ್ನು ಆಡಿದರು. ಮಹಿಳಾ ಸಬಲೀಕರಣ ಕೋಶದ ಸದಸ್ಯರಾದ ಡಾ. ಯಾಸ್ಮಿನ್ ನದಾಫ್ ಇವರು ಸ್ವಾಗತ ಭಾಷಣ ನೇರವೇರಿಸಿ ಕೊಟ್ಟರು, ಮಹಿಳಾ ಸಬಲೀಕರಣ ಕೋಶದ ಸದಸ್ಯರಾದ ಡಾ. ನಂದಿನಿ ದೇವರಮನಿ ಇವರು ಅತಿಥಿ ಪರಿಚಯ ಮಾಡಿಕೊಟ್ಟರು. ಪ್ರಶಸ್ತಿ ವಿತರಣಾ ಕಾರ್ಯಕ್ರಮವನ್ನು ಡಾ. ಮಲ್ಲಮ್ಮ ವಿ ರೆಡ್ಡಿ ಇವರು ನಡೆಸಿಕೊಟ್ಟರು. 'ಡಿ' ದರ್ಜೆ ಮಹಿಳಾ ನೌಕರರಿಗೆ ಉಡುಗೊರೆ ನೀಡುವ ಕಾರ್ಯಕ್ರಮವನ್ನು ಡಾ. ಶಿವಲೀಲಾ ಹೀರೆಮಠ ಇವರು ನಡೆಸಿಕೊಟ್ಟರು. ಮಹಿಳಾ ಸಬಲೀಕರಣ ಕೋಶದ ಇನ್ನಿತರ ಸದಸ್ಯರಾದ ಶ್ರೀಮತಿ. ದೀಪಾ ಜೋಶಿ, ಶ್ರೀಮತಿ. ವಾಣಿ ಪೋತದಾರ್, ಕು. ಪೂಜಾ ಖಾತೇದಾರ, ಬೋರವ್ವ ಇವರು ಉಪಸ್ಥಿತರಿದ್ದರು. ಪ್ರವೀಣ ದಾವನೆ ಇಂಗ್ಲೀಷ ವಿಭಾಗದ ವಿದ್ಯಾರ್ಥಿ ಪ್ರಾರ್ಥಿಸಿದರು. ಮಹಿಳಾ ಸಬಲೀಕರಣ ಕೋಶದ ಸದಸ್ಯರಾದ ಡಾ.ಅಶ್ವಿನಿ ಜಾಮುನಿ ಕಾರ್ಯಕ್ರಮ ನಿರೂಪಿಸಿದರು.

# ಮಾ 28ಕ್ಕೆ ಮೇಯರ್ ಮತ್ತು ಉಪಮೇಯರ್ ಚುನಾವಣೆ

ಬಳ್ಳಾರಿ ಮಾ-: ಬಳ್ಳಾರಿ ಮಹಾನಗರ ಪಾಲಿಕೆಯ '23ನೇ ಅವಧಿಗೆ' ಮೇಯರ್ ಮತ್ತು ಉಪಮೇಯರ್ ಸ್ಥಾನಗಳ ಮೀಸಲಾತಿಯನ್ನು ನಿಗದಿಪ'ಡಿಸಲಾಗಿದೆ ಎಂದು ಪ್ರಾದೇಶಿಕ ಆಯುಕ್ತರ ಕಾರ್ಯಾಲಯ, ಕಲಬುರಗಿ ವಿಭಾಗ ಅಧಿಸೂ ಚನೆಯನ್ನು ಹೊರಡಿಸಿದ್ದಾರೆ.

ಬಳ್ಳಾರಿ ಮಹಾನಗರ ಪಾಲಿಕೆಯ ಮೇಯರ್ ಸ್ಥಾನವು 'ಸಾಮಾನ್ಯ ವರ್ಗ'(ಪುರುಳ), ಉಪ-ಮೇಯರ್ ಸ್ಥಾನವು ಹಿಂದುಳಿದ ವರ್ಗ (ಮಹಿಳೆ) ಮೀಸಲಿರಿಸಲಾಗಿರುತ್ತದೆ. ಹಾಗೂ ನಾಲ್ಕು ಸ್ಥಾಯಿ ಸಮಿತಿಗಳಿಗೆ ಚುನಾವಣೆಯು ಇದೆ ತಿಂಗಳು ಮಾ 28 ಸಮಯ 12:30 ಕ್ಕೆ ಮಹಾನಗರ ಪಾಲಿಕೆ ಕಚೇರಿಯಲ್ಲಿ ಜರುಗಿಸಲಾಗುತ್ತದೆ ಎಂಬ ಮಾಹಿತಿ ತಿಳಿದು ಬಂದಿದೆ!, ಮೇಯರ್ ಮತ್ತು ಉಪಮೇಯರ್ ಯಾರಾಗುತ್ತಾರೋ ಏನಾಗುತ್ತೇ? ಎನ್ನುವುದು ಕಾದುನೋಡಬೇಕಾಗಿದೆ.

